287 (46) : ಶ್ರೀ ಅಶೋಕ ಆರ್. (ಉತ್ತರಹಳ್ಳಿ) ಮಾನ್ಯ ಕಂದಾಯ ಮತ್ತು ಸಂಸದೀಯ ವ್ಯವಹಾರಗಳ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಕೂಲಿಗಾಗಿ ಕಾಳು ಯೋಜನೆಯಡಿಯಲ್ಲಿನ ಅಕ್ಕಿ ಕಾಳಸಂತೆಕೋರರ ಪಾಲಾದ ನಂತರ ಎಚ್ಚೆತ್ತಿರುವ ಸರ್ಕಾರವು ಇನ್ನೂ ಮುಂದೆ ಬರಪರಿಹಾರ ಕಾಮಗಾರಿಗಳನ್ನು ಗ್ರಾಮ ಪಂಚಾಯ್ತಿ ವ್ಯಾಪ್ತಿಗೆ ನೀಡಲು ಮುಂದಾಗಿದೆಯೇ;

ಆ) ಹಾಗಿದ್ದಲ್ಲಿ, ಇದಕ್ಕೆ ಕಾರಣಗಳೇನು;

ಇ) ಇದರ ರೂಪು-ರೇಷೆಗಳೇನು (ಪೂರ್ಣ ವಿವರ ನೀಡುವುದು);

ಈ) ಇದರಿಂದಾಗಿ ತಾಲ್ಲೂಕು ಮಟ್ಟದಲ್ಲಿ ಇದ್ದಂತಹ ಶಾಸಕರ ಅಧ್ಯಕ್ಷತೆಯ ಬರಪರಿಹಾರ ಸಮಿತಿಯ ಅಸ್ಥಿತ್ವಕ್ಕೆ ಧಕ್ಕೆಯುಂಟಾಗುವುದಿಲ್ಲವೆ;

ಉ) ಅದರ ಕಾರ್ಯವ್ಯಾಪ್ತಿ ಏನು;

ಊ) ಕಾಮಗಾರಿಗಳನ್ನು ಹಾಗೂ ಕೂಲಿ-ಆಹಾರ ವಿತರಣೆಯನ್ನು ಯಾವ ರೀತಿ ಅನುಷ್ಠಾನಗೊಳಿಸಲಾಗುವುದು;

ಋ) ಗ್ರಾಮ ಪಂಚಾಯ್ತಿಗಳು ಈ ಕಾರ್ಯವನ್ನು ನಿರ್ವಹಿಸಲು ಸಮರ್ಥವಾಗಿವೆಯೇ; ಈ ದಿಸೆಯಲ್ಲಿನ ಸರ್ಕಾರದ ನಿಲುವೇನು?

ಶ್ರೀ ಎಂ.ಪಿ. ಪ್ರಕಾಶ್ (ಕಂದಾಯ ಮತ್ತು ಸಂಸದೀಯ ವ್ಯವಹಾರಗಳ ಸಚಿವರು)

ಅ) ಪರಿಶೀಲಿಸಲಾಗುತ್ತಿದೆ.

ಆ) ಈಗಿರುವ ಭಾರತ ಸರ್ಕಾರದ ನಿಯಮಗಳಲ್ಲಿ ಪಂಚಾಯಿತಿಗಳಿಗೆ ನೀಡಲು ಅವಕಾಶವಿಲ್ಲ.

ಇ) ಪರಿಶೀಲನೆಯಲ್ಲಿರುವುದರಿಂದ ಅದು ಉದ್ಭವಿಸುವುದಿಲ್ಲ.

ಈ) ಹೌದು

ಉ) ಸಂಪೂರ್ಣ ತಾಲ್ಲೂಕಿನ ವ್ಯಾಪ್ತಿ ಇದೆ.

ಊ) ಆ ಪ್ರಶ್ನೆ ಈಗ ಉದ್ಭವಿಸುವುದಿಲ್ಲ.

ಋ) ಪರಿಶೀಲಿಸಲಾಗುತ್ತಿದೆ.

.....

290 (522) : Sri Darmasingh Hon'ble Chief Minister?

a) Whether it has come to the notice of the Government that names were left out from the electoral rolls during the last general elections?

b) What actions have been taken up in this regard?

c) Is it a fact that every voter has not been issued the voters' ID card properly?